ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
**E-mail ID:** icps.kar@gmail.co **Ph.No.080-22879383/82**

ಸಂ: ಕೆಎಸ್ಐಸಿಪಿಎಸ್:ಮರ-02:ಎನ್.ಹೆಚ್.ಆರ್.ಸಿ/ಕಲಬುರಗಿ-1.2020-21 ದಿ:11/12/2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು.

ಮಾನ್ಯರೇ,

**ವಿಷಯ:** ಸೂರ್ಯಗ್ರಹಣದಂದು ಮೂಢನಂಬಿಕೆಗಳಿಂದ ನಡೆಯುವ ಅಹಿತಕರ ಘಟನೆಗಳು ಸಂಭವಿಸದಂತೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ

**ಉಲ್ಲೇಖ:**
1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮಮಅಇ ಇವರ ಅಸ ಪತ್ರ ಸಂಖ್ಯೆ: ಕೆಎಸ್ ಐಸಿಪಿಎಸ್:ಮರ-02:ಎನ್ ಹೆಚ್ ಆರ್ ಸಿ/ಕಲಬುರಗಿ-1.2020-21 ದಿನಾಂಕ:20-11-2020
2 ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ಕಾಯ್ದೆ, 2017, ದಿ:07.12.2017
3 ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಹಾಗೂ ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ನಿಯಮಗಳು 2020, ದಿ:08.05.2020.

* * * * * *

ವಿಷಯಕ್ಕೆ ಸಂಬಂಧಿಸಿದಂತೆ ಸೂರ್ಯಗ್ರಹಣದಂದು ಹೊಂಬರುವ ತೀಕ್ಷ್ಣವಾದ ಕಿರಣಗಳಿಗೆ ವಿಶೇಷ ಅಗತ್ಯತೆ ಇರುವ ಮಕ್ಕಳ ವಿರೂಪಗಳನ್ನು ಗುಣಪಡಿಸಬಹುದೆಂಬ ಮೂಢನಂಬಿಕೆಯಿಂದ ಇಂತಹ ಮಕ್ಕಳನ್ನು ಗುಂಡಿಗಳಲ್ಲಿ/ ತಿಪ್ಪೆಗುಂಡಿಗಳಲ್ಲಿ ಕುತ್ತಿಗೆವರೆಗೆ ಹೂಳುವ ಆಚರಣೆಯು ರಾಜ್ಯದ ಕೆಲವು ಕಡೆ ಈ ಹಿಂದೆ ನಡೆದಿದ್ದು ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ರೀತಿ ಘಟನೆಗಳು ಮರುಕಳಿಸದಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದವತಿಯಿಂದ ಎಲ್ಲಾ ಬಗೆಗಿನ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

ಡಿಸೆಂಬರ್ ಮಾಹೆಯಲ್ಲಿ ಸೂರ್ಯಗ್ರಹಣ ಇರುವುದರಿಂದ ಇಂತಹ ಮೂಢನಂಬಿಕೆಗಳ ವಿರುದ್ಧ ಅರಿವು ಮೂಡಿಸಲು ಇಲಾಖೆ ವತಿಯಿಂದ ರೇಡಿಯೋ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ಪ್ರಸಾರ ಮಾಡಲಾಗುತ್ತಿದೆ.

| ದಿನಾಂಕ | ಸಮಯ | ರೇಡಿಯೋ ಕಾರ್ಯಕ್ರಮದ ವಿವರ (Channel) |
|---|---|---|
| 10-12-2020 ರಿಂದ 12-12-2020 ರವರೆಗೆ | ಬೆಳಿಗ್ಗೆ 6:50 ಕ್ಕೆ<br>ಬೆಳಿಗ್ಗೆ 8:30 ಕ್ಕೆ<br>ಬೆಳಿಗ್ಗೆ 8:45 ಕ್ಕೆ | ಆಕಾಶವಾಣಿ<br>ವಿವಿದ್ ಭಾರತಿ<br>ಎಫ್ ಎಂ ರೈಂಬೋ |
| 13-12-2020 | ಬೆಳಿಗ್ಗೆ 6:30 ಕ್ಕೆ<br>ಬೆಳಿಗ್ಗೆ 8:02 ಕ್ಕೆ | ಆಕಾಶವಾಣಿ<br>ಎಫ್ ಎಂ ರೈಂಬೋ |

ಸದರಿ ಕಾರ್ಯಕ್ರಮದ ಸದುಪಯೋಗವನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಡೆಯುವಂತೆ ಸೂಕ್ತ ಕ್ರಮ ಕೈಗೊಳ್ಳುವುದು.

ಮುಂದುವರೆದು, ಉಲ್ಲೇಖಿತ(2)ರ ಕಾಯ್ದೆಯಯನ್ವಯ ಕರ್ನಾಟಕ ಅಮಾನವೀಯ ದುಷ್ಟ ಪದ್ಧತಿಗಳು ಮತ್ತು ವಾಮಾಚಾರ ಇವುಗಳ ಪ್ರತಿಬಂಧ ಮತ್ತು ನಿರ್ಮೂಲನೆ ನಿಯಮಗಳು 2020 ದಿನಾಂಕ:08-05-2020ರ ನಿಯಮ 2(1)(ಬಿ)ರಲ್ಲಿ "ನೋಡಲ್ ಇಲಾಖೆ" ಎಂದರೆ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಎಂದು, ಹಾಗೂ ನಿಯಮ 3(1)ರಲ್ಲಿ "ಅಧಿನಿಯಮದ 12ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಮಾನವೀಯ ದುಷ್ಟ ಪದ್ಧತಿಗಳ ಮತ್ತು ವಾಮಾಚಾರದ ದುಷ್ಟ ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವನ್ನುಂಟು ಮಾಡಲು ಹಾಗೂ ಹಾನಿಗೊಳಗಾದ ಸಂತ್ರಸ್ತರಿಗೆ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರು, ಆಡಳಿತ, ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ನೋಡಲ್ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳನ್ನೊಳಗೊಂಡ ಜಿಲ್ಲಾಡಳಿತದ ಮೂಲಕ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಪರಿಹಾರವನ್ನು ಒದಗಿಸಲು ನೋಡಲ್ ಇಲಾಖೆಯು ಅರಿವು ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು" ಎಂದು ಉಲ್ಲೇಖಿಸಿದೆ.

ಆದ್ದರಿಂದ, ಸದರಿ ಇಲಾಖೆಯ ಸಹಯೋಗದೊಂದಿಗೆ ಮೂಢನಂಬಿಕೆಗಳ ಆಚರಣೆಯ ವಿರುದ್ಧ ಅರಿವು ಕಾರ್ಯಕ್ರಮಗಳನ್ನು ಕೈಗೊಂಡು ಮಾಹಿತಿಯನ್ನು ಈ ಕಛೇರಿಗೆ ನೀಡಲು ತಿಳಿಸಿದೆ.

ತಮ್ಮ ವಿಶ್ವಾಸಿ

11.12.2020

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.